ಇರುವುದು ಒಂದೇ ಬಣ್ಣ. ಅದು ಬಿಳಿ. ಅದರ ಒಳಗೆ ಏಳು ಬಣ್ಣಗಳಿವೆ ಎಂದು ಹೇಳಿದ್ದಲ್ಲದೆ ಒಂದು ಬಣ್ಣದ ಚಕ್ರವನ್ನು ತಯಾರಿಸಿದ್ದನಂತೆ. ಹದಿನೆಂಟನೇ ಶತಮಾನದಲ್ಲಿ ಬಣ್ಣದ ಸಿದ್ಧಾಂತದ ಪರಿಕಲ್ಪನೆ ವಿಶೇಷ ಮೆರುಗನ್ನು ಪಡೆಯಿತು. ಜೋಹನ್ ವುಲ್ಫ ಎಂಬುವವನು ಕೇಸರಿ ಬಣ್ಣವನ್ನು ಆವಿಷ್ಕರಿಸಿದನಂತೆ. ಸಿಲ್ಕ್ ರೋಡಿನ ಪಶ್ಚಿಮ ಭಾಗದಿಂದ ಬಂದ ನರಂಗ ಕಿತ್ತಲೆ ಹಣ್ಣು ಇವತ್ತಿನ ಆರೆಂಜ್ ಕೆಂಪು- ಹಳದಿ ಮಿಶ್ರಿತ ಬಣ್ಣವನ್ನು ಪರಿಚಯಿಸಿತು. ಇನ್ನೂರು ವರ್ಷಗಳ ಕಾಲ ರಹಸ್ಯವಾಗಿಟ್ಟಿದ್ದ ರೇಷ್ಮೆಹುಳುವಿನ ಬಣ್ಣ ಬಿಳಿ. ಹತ್ತೊಂಬತ್ತನೇ ಶತಮಾನದಲ್ಲಿ, ಹೊಸಹೊಸ ಬಣ್ಣಗಳ ಆವಿಷ್ಕಾರ ಪ್ರಾರಂಭವಾಯಿತು.



1856ರಲ್ಲಿ ಪರ್ಕಿನ್ ಎಂಬುವವರು ಕೃತಕ ಬಣ್ಣ ತಯಾರಿಸಿದ್ದು ಐತಿಹಾಸಿಕ ಮೈಲುಗಲ್ಲಾಯಿತು. ಅದುವೇ ನೇರಳೆ ಬಣ್ಣ. ಬಣ್ಣಗಳ ಆಕರ್ಷಣೆ ಜಗತ್ತಿನ ಎಲ್ಲಾ ಕಾಲಘಟ್ಟಗಳ ಜನರಲ್ಲಿಯೂ ಇತ್ತು. ಪ್ರಾಚೀನ ಕಾಲದಲ್ಲಂತೂ ರತ್ನಗಳು ತಮ್ಮ ಮನಮೋಹಕ ಬಣ್ಣ ಮತ್ತು ಪ್ರಕಾಶಗಳಿಂದ ಜನರಿಗೆ ಪ್ರೀತಿಪಾತ್ರವಾಗಿದ್ದವು. ದೈವಿಕಶಕ್ತಿ ಮತ್ತು ರೋಗನಿವಾರಕ ಶಕ್ತಿ ಬಣ್ಣಗಳಿಗಿದೆ ಎಂದು ನಂಬಿದ್ದರು. ಒಂಬತ್ತು ಬಗೆಯ ಬಣ್ಣದ ರತ್ನಗಳು, ಎಪ್ಪತ್ತೈದು ಬಗೆಯ ಉಪರತ್ನಗಳು ವಿಶಿಷ್ಟ ಸ್ಥಾನ ಪಡೆದವು. ತಾಳಿಕೆ, ಹೊಳಪು, ಪಾರದರ್ಶಕತ್ವಕ್ಕೆ ಸಾಕ್ಷಿಯಾಗಿದ್ದವು. ಆಶ್ಚರ್ಯವೆಂಬಂತೆ ವೈಢೂರ್ಯ ತಂತುಮಯ ಎಂಬ ಶಿಲೆಯಿಂದ ತಯಾರಾಯಿತು. ವಜ್ರ, ಬಿಳಿಯ ಬಣ್ಣಕ್ಕೆ ಹತ್ತಿರವಾಯಿತು. ಬಣ್ಣ ಅಂತ ಬಂದಾಗ ಕೆಂಪು ಬಹಳ ವಿಶೇಷ. ನವಜಾತ ಶಿಶು ಆರು ತಿಂಗಳ ಕಾಲ ಬ್ಲ್ಯಾಕ್ ಅಂಡ್ ವೈಟ್‌ಗಳನ್ನು ಮಾತ್ರ ಗುರುತಿಸುತ್ತದೆ. ನಂತರ ಅದು ಇಷ್ಟಪಡುವ ಬಣ್ಣ ಕೆಂಪು. ಈ ಕೆಂಪು ಬಣ್ಣ ಮಾನವರನ್ನು ಕಾಡಿದಷ್ಟು ಬೇರಾವ ಬಣ್ಣವೂ ಕಾಡಿರಲಾರದು, ಮನಸೆಳೆದಿರಲಾರದು ಎಂದೇ ಹೇಳಬೇಕು. ನವರತ್ನಗಳಲ್ಲಿ ಇದು ಒಂದು. ಸೂರ್ಯನ ಮೂಲ ಬಣ್ಣ ಕೆಂಪು. ರಕ್ತವರ್ಣ ಕೆಂಪು. ಧೈರ್ಯ ಸಾಹಸಗಳ ಪ್ರತೀಕ ಕೆಂಪು ಉರಿಯುವ ಇದ್ದಿಲು ಕೆಂಪು. ಪ್ರಿಯತಮೆಗೆ ಕೊಡಲು ಕೆಂಪು ಗುಲಾಬಿ ಇಲ್ಲ ಅಂತ ಕೊರಗುತ್ತಿದ್ದ ಪ್ರಿಯಕರನ ನೋವಿಗೆ ಸ್ಪಂದಿಸಿದ ಕೋಗಿಲೆಯೊಂದು ಬಿಳಿಯ ಬಣ್ಣದ ಗುಲಾಬಿಯನ್ನು ತನ್ನ ಕೆಂಪು ರಕ್ತ ಕೊಟ್ಟು, ಕೆಂಪು ಗುಲಾಬಿಯಾಗಿಸಿದ ಸಂದರ್ಭವನ್ನು ಓದಿದ್ದೇವೆ. ಪ್ರೀತಿಯ ಸಂಕೇತವೇ ಕೆಂಪು. ಹಾಗೆಯೇ ರಕ್ತ ಕೆಂಪಾಗಿರುವುದಕ್ಕೆ ಕಬ್ಬಿಣದ ಅಂಶ ಕಾರಣ ಎಂಬರು... ಮಂಗಳ ಗ್ರಹ ಕೆಂಪು ಬಣ್ಣ ಹೊಂದಿರುವುದಕ್ಕೆ ಐರನ್ ಆಕ್ಸೈಡ್ ಕಾರಣವಂತೆ. ನಾವು ಬಣ್ಣಗಳನ್ನು ನೋಡಲು ಸಹಾಯ ಮಾಡುವುದು ಐರೀಸ್ ಎಂದಿದೆ ವಿಜ್ಞಾನ.

ಕೆಂಬೂತ ಎನ್ನುವ ಹೆಸರಿನ ಕೆಂಪು ವರ್ಣದ ಹಕ್ಕಿ. ಕೆಂಜಿಗೆ ಎಂಬ ಹೆಸರಿನ ಕೆಂಪು ವರ್ಣದ ದೊಡ್ಡ ಇರುವೆ. ಅಸಂಖ್ಯವಾಗಿರುವ ಕೆಂಪು ಗಿಣಿಗಳು. ಭಾರತದ ನಾನಾ ಭಾಗಗಳಲ್ಲಿ ಮತ್ತು ಸಿಂಧ್ ಪ್ರಾಂತ್ಯದಲ್ಲಿ ಕಂಡು ಬರುವ ಕೆಂಪು ವರ್ಣದ ಸಿಂಧಿ ಹಸುಗಳು. ಕೆಂಪು ಕ್ರಾಂತಿಯನ್ನೇ ಮಾಡಿವೆ ಎಂಬ ಕೆಂಪಿನ ಸಡಗರದ ನಡುವೆ ಕ್ಷೀರಕ್ರಾಂತಿ ನೀಲಿಕ್ರಾಂತಿ, ಹಸುರು ಕ್ರಾಂತಿಗಳನ್ನು ಅವುಗಳು ರೈತರಿಗೆ ಆರ್ಥಿಕತೆಯನ್ನು ಸುಧಾರಿಸಿಕೊಳ್ಳುವಲ್ಲಿ ಪ್ರಮುಖ ಪಾತ್ರ ವಹಿಸಿದ್ದನ್ನು ಮರೆಯುವಂತಿಲ್ಲ. ಪ್ರಪಂಚದ ಅಚ್ಚುಮೆಚ್ಚಿನ ಬಣ್ಣ ನೀಲಿ. ಚಂದಮಾಮ ತೇಲುತ್ತಾ ಬರುವುದೇ ನೀಲಿಯ ಬಾನಿಂದ ತಾನೇ? ಹಾಗಾಗಿ ತಾಯಿ ಮಗುವಿನ ಇಷ್ಟದ ಬಣ್ಣ ಲೋಕದ ಇಷ್ಟದ ಬಣ್ಣವಾಗುವುದರಲ್ಲಿ ತಪ್ಪೇನಿದೆ? ಅಷ್ಟೇ ಏಕೆ ಸೊಳ್ಳೆಗಳ ಪ್ರೀತಿಯ ಬಣ್ಣವೂ ನೀಲಿ. ಅಚ್ಚರಿಯ ಒಂದು ಸಂಗತಿ ಎಂದರೆ ಈಜಿಪ್ಟ್ ರಾಣಿ ಕ್ಲಿಯೋಪಾತ್ರಳ ಸೌಂದರ್ಯ ಪ್ರಜ್ಞೆಗೆ ಅಂದರೆ ಮೈಬಣ್ಣ ಮತ್ತು ವಸ್ತ್ರಾಲಂಕಾರಕ್ಕೆ ತಾಮ್ರ ಯುಗದಲ್ಲಿ ಬಳಸುತ್ತಿದ್ದ ಕೇಸರಿ ಕಾರಣ ಎಂದು ತಿಳಿದಿದೆ. ಅವತ್ತು ಬಳಸುತ್ತಿದ್ದ ಕೇಸರಿಯು ಬರುಬರುತ್ತಾ ಕಾಸ್ಮೆಟಿಕ್ಸ್‌ಗೆ ಬಳಕೆಯಾಗಿದ್ದು ವಿಶೇಷ.

ಇಷ್ಟು ಮಾತ್ರವಲ್ಲ. ನಾಚಿಕೊಂಡಾಗಲೂ ನಮ್ಮ ಮುಖ, ಕೆನ್ನೆ, ಕುತ್ತಿಗೆಯ ಭಾಗಗಳು ಕೆಂಪಾಗುತ್ತವೆ. ದಿಢೀರ್ ಸಂವೇದನೆಯಿಂದ ಚರ್ಮದ ಕೆಳಗಿನ ಸಣ್ಣ ರಕ್ತನಾಳಗಳು ಹಿಗ್ಗುತ್ತವೆ. ಈ ಕಾರಣದಿಂದ ಮುಖ ಕೆಂಪಗೆ ಕಾಣುತ್ತದೆ. ಆದರೆ, ಕಪ್ಪುಬಣ್ಣದವರು ನಾಚಿಕೊಂಡಾಗ ಅಷ್ಟು ಕೆಂಪಾಗಿ ಕಾಣುವುದಿಲ್ಲ.